ಸರ್ಕಾರದ ಗಮನದಲ್ಲಿದೆಯೇ ? ಈ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಸದನದಲ್ಲಿ ಹೇಳಿಕೆಯನ್ನು ಬಯಸಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):- ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸುತ್ತೇನೆ.

ಪ್ರೌಢ ಶಿಕ್ಷಣ ಮಂಡಳಿಯವರು ಎಸ್. ಎಸ್.ಎಲ್.ಸಿ ಪರೀಕ್ಷೆಯ ಅಂಕ ಪಟ್ಟಿಯಲ್ಲಿ ಜನ್ಮ ದಿನಾಂಕವನ್ನು ನಮೂದಿಸಿರುವ ಬಗ್ಗೆ.

ಶ್ರೀ ಕೆ. ಲಕ್ಕಣ್ಣ (ರಾಜಾಜಿ ನಗರ):- ಮಾನ್ಯ ಅಧ್ಯಕ್ಷರೇ, ಪ್ರೌಢ ಶಿಕ್ಷಣ, ಮಂಡಳಿಯವರು ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆ ನಂತರ ಅಂಕಪಟ್ಟಿಯನ್ನು ಕೊಡುವಾಗ ಅದರಲ್ಲಿ ಅಭ್ಯರ್ಥಿಗಳ ಜನ್ಮ ದಿನಾಂಕವನ್ನು ನಮೂದಿಸಲಾಗಿರುತ್ತದೆ. ಈ ಸಂಬಂಧದಲ್ಲಿ ಜನ್ಮ ದಿನಾಂಕದ ವ್ಯತ್ಯಾಸಗಳನ್ನು ಸರಿಪಡಿಸುವ ಬಗ್ಗೆ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಿದ್ದರೂ ಕೂಡ, ನ್ಯಾಯಾಲಯವು ಆದೇಶ ನೀಡಿದ್ದರೂ, ಹಾಗೂ ಜರೂರಾಗಿ ವಿಲೇವಾರಿ ಮಾಡಲು ನಿಯಮಗಳಿದ್ದರೂ ಕೂಡ, ವಿಲೇವಾರಿ ಮಾಡದೆ ವಿನಾಕಾರಣ, ವಿಳಂಬ ಮಾಡುತ್ತಿರುವುದರಿಂದ, ಸಂಬಂಧಿಸಿದ ಅಭ್ಯರ್ಥಿಗಳಿಗೆ ಮುಂದಿನ ವ್ಯಾಸಂಗಕ್ಕೆ ತೊಂದರೆಯಾಗುತ್ತಿದ್ದು ಮತ್ತು ಕೆಲಸಕ್ಕೆ ಸೇರಲು ಅಡಚಣೆ ಉಂಟಾಗಿರುತ್ತದೆ. ಆಕಾರಣ ಈಗ ಹಾಲಿ ಮಂಡಳಿಯ ಮುಂದೆ ಬಾಕಿ ಉಳಿದಿರುವ ಇಂತಹ ಜನ್ಮ ದಿನಾಂಕದ ಸರಿಪಡಿಸುವ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಬೇಕೆಂದು ಮಾನ್ಯ ಪ್ರೌಢ ಶಿಕ್ಷಣ ಸಚಿವರಲ್ಲಿ ಕೋರುತ್ತೇನೆ. ಅಭ್ಯರ್ಥಿಯ ಹೆಸರು : ಮಲ್ಲಿಕಾರ್ಜುನ ಹೆಗ್ಡೆ ಪಿ. ಕಾನೂನು ವಿಭಾಗದ ಕಡತದ ಸಂಖ್ಯೆ : 450 ಎಲ್ ಎಸ್ ಬಿ 91, ದಿನಾಂಕ 11-7-1991.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ :- (ಕಾರ್ಮಿಕ ಸಚಿವರು):- ಮಾನ್ಯ ಅಧ್ಯಕ್ಷರೇ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಪರವಾಗಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಎಸ್.ಎಸ್.ಎಲ್.ಸಿ. ಪರೀಕ್ಷೆಯ ನಂತರ ಪ್ರಮಾಣ ಪತ್ರಗಳನ್ನು ಶಾಲೆಗಳಿಗೆ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯಿಂದ ರವಾನಿಸಲಾಗುತ್ತಿದೆ. ಈ ರೀತಿ ಕಳುಹಿಸಿದ ಪ್ರಮಾಣ ಪತ್ರಗಳಲ್ಲಿ ಜನ್ಮ ದಿನಾಂಕದ ಬಗ್ಗೆ ಏನಾದರೂ ವ್ಯತ್ಯಾಸವಿದ್ದಲ್ಲಿ ಸಂಬಂಧಪಟ್ಟ ಅಭ್ಯರ್ಥಿಯು ಬೇಕಾಗಿರುವ ದಾಖಲೆಗಳೊಂದಿಗೆ ಶಾಲೆಯ ಮುಖಾಂತರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ ಕಳುಹಿಸಿದಲ್ಲಿ ಸರಿಪಡಿಸಲಾಗುತ್ತದೆ. ಈ ರೀತಿ ಬಂದ ಅರ್ಜಿಗಳಲ್ಲಿ ಜನ್ಮ ದಿನಾಂಕವು ಪರೀಕ್ಷೆಗೆ ಕಳುಹಿಸಿದ ಅರ್ಜಿಯೊಂದಿಗೆ ಹೋಲಿಸಿದಾಗ ಪ್ರಮಾಣ ಪತ್ರದಲ್ಲಿ ವ್ಯತ್ಯಾಸ ಕಂಡುಬಂದಾಗ ಅದನ್ನು ಕೂಡಲೇ ತಿದ್ದುಪಡಿ ಮಾಡಿ ಕೊಡಲಾಗುತ್ತದೆ.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಪತ್ರಗಳನ್ನು ಶಾಲೆಗೆ ರವಾನಿಸುವಾಗ, 60 ದಿನಗಳೊಳಗಾಗಿ ಪ್ರಮಾಣ ಪತ್ರದಲ್ಲಿ ಏನಾದರೂ ವ್ಯತ್ಯಾಸಗಳಿದ್ದಲ್ಲಿ (ಅಂದರೆ ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ಜನ್ಮ ದಿನಾಂಕ ಮತ್ತು ಇತರೆ) ಮಂಡಳಿಗೆ ಶಾಲಾ ದಾಖಲಾತಿಗಳೊಂದಿಗೆ ತಿದ್ದುಪಡಿಗಾಗಿ ಯೋಗ್ಯ ವಿವರ, ಅಡಕಗಳೊಂದಿಗೆ ರವಾನಿಸಲು ಸಹಾ ತಿಳಿಸಲಾಗಿದೆ.

ಕುಂದಾಪುರ ತಾಲ್ಲೂಕಿನ ಅಂಪಾರು ಮಂಡಲದ ಕಾರ್ಯದರ್ಶಿ ಮತ್ತು ಆಡಳಿತ ಅಧಿಕಾರಿಗಳಿಂದ ಅಧಿಕಾರ ದುರುಪಯೋಗ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ):- ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಅಂಪಾರ ಮಂಡಲದ ಕಾರ್ಯದರ್ಶಿ ಮತ್ತು ಆಡಳಿತಾಧಿಕಾರಿಗಳು ಅಧಿಕಾರ ದುರುಪಯೋಗ ಹಾಗೂ ಭ್ರಷ್ಟಾಚಾರಗಳಿಂದ ಮಂಡಲ ಪಂಚಾಯತ್, ಜಿಲ್ಲಾಪರಿಷತ್ ಹಾಗೂ ಸರಕಾರದ ಬೊಕ್ಕಸಕ್ಕೆ ಸಾವಿರಾರು ರೂಪಾಯಿಗಳ

ನಷ್ಟವನ್ನುಂಟು ಮಾಡಿರುತ್ತಾರೆ.

(1) ಜನತೆಯಿಂದ ವಸೂಲಾದ ತೆರಿಗೆಗಳನ್ನು ಸರಕಾರದ ಖಜಾನೆಗೆ ಜಮಾ ಮಾಡದೇ ಇರುವುದನ್ನು ಈಗಾಗಲೇ ಸಾರ್ವಜನಿಕ ಅವಗಾಹನೆಗೆ ಬಂದು ಆಡಳಿತಾಧಿಕಾರಿಗಳಲ್ಲಿ ಈ ವಿಷಯ ಜನತೆ ಪ್ರಸ್ತಾಪಿಸಿದಾಗಲೂ ಜನರ ಮಾತನ್ನು ಲೆಕ್ಕಿಸದೆ ಕಾರ್ಯದರ್ಶಿಯ ಪರವಾಗಿ ವಾದಿಸಿ ಜನರ ಬಾಯಿಯನ್ನು ಮುಚ್ಚಲೆತ್ನಿಸಿರುವುದರಿಂದ ಆಡಳಿತಾಧಿಕಾರಿಗಳು ಕಾರ್ಯದರ್ಶಿಯವರೊಂದಿಗೆ ಈ ಭ್ರಷ್ಟಾಚಾರದಲ್ಲಿ ಶಾಮೀಲಾಗಿದ್ದಾರೆಂದು ಸಾಬೀತಾದಂತಾಗಿದೆ.

(2) ಜಿಲ್ಲಾ ಪರಿಷತ್ ವತಿಯಿಂದ ನಡೆಯುತ್ತಿರುವ ಶಾಲೆಗೆ ವಿಂಗಡಿಸಿದ ಸ್ಥಳದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಶಾಲಾಭಿವೃದ್ಧಿ ಸಮಿತಿಯವರು ನೆಲಬಾಡಿಗೆಯನ್ನು ಯಾರಿಗೂ ಕೊಡಬಾರದು ಎಂದು ಮಂಡಲ ಆಫೀಸಿಗೆ ತಿಳಿಸಿದರೂ ಕೂಡ, ಅವರ ವಿರುದ್ಧವಾಗಿ ನೆಲ ಬಾಡಿಗೆಯನ್ನು ಕೊಟ್ಟು ಅಲ್ಲಿಯೇ ಶಾಶ್ವತ ಕಟ್ಟಡವನ್ನು ನಿರ್ಮಿಸಿರುತ್ತಾರೆ. ಇದೇ ಕಟ್ಟಡದಲ್ಲಿ ಲೀತ್ ಮತ್ತು ವೆಲ್ಡಿಂಗ್ ಶಾಪ್‌ಗಳನ್ನು ತೆರೆಯಲು ಹವಣಿಸುತ್ತಿದ್ದಾರೆ.

ಶಾಲೆಗೆ ಅಡ್ಡವಾಗಿ ನಿರ್ಮಿತವಾದ ಈ ಕಟ್ಟಡದಿಂದ ಮಕ್ಕಳಿಗೆ ಶಾಲೆಗೆ ಬರಲು ದಾರಿಯೇ ಇಲ್ಲವಾಗಿದೆ. ಈ ವಿಷಯವಾಗಿ ಈಗಾಗಲೇ ಹೆತ್ತವರಿಂದ ದೂರು ಬಂದಿದೆ.

(3) ಮಂಡಲ್ ಪಂಚಾಯತ್‌ನ ಅಂಗಡಿ ಕಟ್ಟಡಗಳ ಗೋಡೆಗೆ ತಾಗಿ ಇನ್ನೊಂದು ಕಟ್ಟಡ ನಿರ್ಮಾಣವಾಗುತ್ತಿದ್ದಾಗ ಸಾರ್ವಜನಿಕರು ದೂರು ಸಲ್ಲಿಸಿದರು. ನೋಟೀಸಿನ ನಾಟಕವಾಡಿ ಆ ಸ್ಥಳದಲ್ಲಿಯೇ ಕಟ್ಟಡ ತಲೆ ಎತ್ತುತ್ತಿರುವುದು ಸಾರ್ವಜನಿಕರನ್ನು ಕೆರಳಿಸುವಂತಾಗಿದೆ.

(4) ಹೀಗೆ ಮಂಡಲ ಪಂಚಾಯತ್ ವ್ಯಾಪ್ತಿಯಲ್ಲಿ ಕಟ್ಟುವ ಅನಧಿಕೃತ ಹೊಟೆಲ್ ಅಂಗಡಿ ಕಟ್ಟಡಗಳಿಗೆ ಪರವಾನಗಿ ಕೊಟ್ಟಿರುವುದು.

(5) ಕುಂದಾಪುರ ತಾಲೂಕಿನ ಶಂಕರನಾರಾಯಣದ ನೀರು ಸರಬರಾಜಿನ ಪಂಪು ರಿಪೇರಿಗೆ ಕೇವಲ ಎರಡು ವರ್ಷಕ್ಕೆ ಮೂರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುವುದಾಗಿ ತೋರಿಸುವುದು, ಇವರ ಭ್ರಷ್ಟಾಚಾರದ ಹಲವು ಮುಖಗಳಲ್ಲಿ ಒಂದಾಗಿದೆ.

ಆದುದರಿಂದ ಈ ಭ್ರಷ್ಟಾಚಾರದಲ್ಲಿ ತೊಡಗಿರುವ ಮಂಡಲ ಕಾರ್ಯದರ್ಶಿ ಹಾಗೂ ಆಡಳಿತಾಧಿಕಾರಿಗಳನ್ನು ಈ ಕ್ಷಣದಿಂದಲೇ ಅಮಾನತ್ತಿನಲ್ಲಿಟ್ಟು ಮುಂದಿನ ತನಿಖೆ ನಡೆಸಬೇಕೆಂದು ಈ ಸದನದ ಮೂಲಕ ಮಾನ್ಯ ಗ್ರಾಮಾಣಾಭಿವೃದ್ಧಿ ಸಚಿವರಲ್ಲಿ ಕೇಳುತ್ತಿದ್ದೇವೆ.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ತಿನ ಚೀಫ್ ಸೆಕ್ರೆಟರಿಯವರನ್ನು ಅಲ್ಲಿಗೆ ಕಳುಹಿಸಿದ್ದೇವೆ. ಅವರು ಇನ್ಸ್‌ಪೆಕ್ಟ್ ಮಾಡಿ ರಿಪೋರ್ಟ್‌ನ್ನು ಕಳುಹಿಸಿಕೊಡುತ್ತಾರೆ. ಅದು ಬಂದ ನಂತರ ಅದರ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಸುಳ್ಳು ವರದಿ ಕೊಟ್ಟು ಹೋಂ ಟ್ರಾವೆಲ್ಸ್ ಕನ್ಸೆಷನ್ ಪಡೆದಿರುವುದು.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :- ಮಾನ್ಯ ಅಧ್ಯಕ್ಷರೆ, ಸುಳ್ಳು ವರದಿ ಕೊಟ್ಟು ಸರ್ಕಾರಕ್ಕೆ ಹಣದ ವಿಷಯದಲ್ಲಿ ಮೋಸ ಮಾಡಿ ಹೋಂ ಟ್ರಾವಲ್ ಕನ್ಸೇಷನ್ ತೆಗೆದುಕೊಂಡಿದ್ದಾರೆ ಮತ್ತು ಶ್ರೀಮತಿ ಮೇರಿಕುಟ್ಟಿ ಮ್ಯಾಥ್ಯೂಸ್ ಮತ್ತು ಶ್ರೀಮತಿ ತಂಗಂ ಜನಾರ್ಧನ್ ಎಂಬುವ ಹೆಂಗಸರುಗಳನ್ನು ಮದುವೆಯಾಗಿರುತ್ತಾರೆಂಬ ಸಿಆರ್‌ಎಂ 58 ಎಸ್‌ಇಸಿಓಡಿ 88 ನಂಬರಿನ ದಿನಾಂಕ 31-5-1991 ಸಿ.ಓ.ಡಿ ಅವರ ತನಿಖಾ ವರದಿ